Reg. No. : ....................................

Name : ........................................

**FY-806**

**IMPROVEMENT / SUPPLEMENTARY EXAMINATION, OCTOBER – 2022**

Part – II

**KANNADA**

Maximum : 80 Scores

Time : **2½** Hours

Cool-off time : **15** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ. (4 × 1 = 4)**

1. 'ಇದ್ಯ ಬಲ್ಲವಗೆ ಭಯವುಂಟೆ' ಪಾಠಭಾಗವು ಯಾವ ಪ್ರಕಾರಕ್ಕೆ ಸೇರುತ್ತದೆ ?

   (ಜನಪದ ತ್ರಿಪದಿ, ಜನಪದ ಕಥೆ, ವಚನ, ಷಟ್ಪದಿ ಕಾವ್ಯ)

2. 'ಡಂಗುರದವನು' – ಈ ಕಥಾಪಾತ್ರ ಬರುವ ಪಾಠ ಯಾವುದು ?

   (ಹುಗ್ಗಿ, ಒಸರು, ಬಕ, ಮೂಢನಂಬಿಕೆಗಳ ಬೀಡಿನಲ್ಲಿ)

3. 'ಎಲ್ಲಿಗೋಕ್ಕೀ ನಿಮ್ಮಪ್ಪ ಸಾಲಕ್ಕ ನಿನ್ ಸಂಬ್ಳ ಇಟ್ಯಾನ' – ಈ ಮಾತನ್ನು ಹೇಳಿದವರು ಯಾರು ?

   (ಅಮ್ಮ, ಅಪ್ಪ, ಕೊಟ್ರ, ಗೌಡರು)

4. 'ಇದು ಜಲಪ್ರಳಯ ! ಪಾಪದ ಕೊಡ ತುಂಬಿದ ಜಗಪ್ರಳಯ !' ಎಂಬ ಸಾಲುಗಳಿರುವ ಕವನ

(ಬ್ಲೆನ್ ಹೀಮ್ ಕದನ, ಸುನಾಮಿಯ ಹಾಡು, ಸುಗ್ಗಿ ಬರುತಿದೆ, ಬೆಳಗು)

**5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ. (4 × 1 = 4)**

5. ಅವನಿ – ಈ ಪದದ ಅರ್ಥವನ್ನು ಬರೆಯಿರಿ.

6. ಹೊಟ್ಟೆಯೊಂದು – ಈ ಪದವನ್ನು ವಿಂಗಡಿಸಿರಿ.

7. ವಿಶಾಲ – ಈ ಪದದ ಭಾವನಾಮ ರೂಪವನ್ನು ಹೆಸರಿಸಿರಿ.

8. ವಿನೋದ – ಈ ಪದದ ತದ್ಭವ ರೂಪವನ್ನು ನೀಡಿರಿ.

9. ಶಕ್ತ – ಈ ಪದದ ನಿಷೇದಾರ್ಥ ರೂಪವನ್ನು ಬರೆಯಿರಿ.

10. 'ಪ್ರಪಂಚ' – ಇದಕ್ಕೆ ಎರಡು ಪರ್ಯಾಯ ಪದಗಳನ್ನು ಹೆಸರಿಸಿರಿ.

**11 ರಿಂದ 18 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ. (5 × 2 = 10)**

11. (ಅ) ದೇವಕಿಯು ಕಾಸರಗೋಡಿಗೆ ಹೋಗುವ ಬಸ್ಸಿಗಾಗಿ ಕಾದು ಸುಸ್ತಾದಳು.

(ಆ) ಮುಂದಿನ ವಾರ ನಡೆಯಲಿರುವ ಚುನಾವಣೆಗೆ ರಾಜಕೀಯ ಪಕ್ಷಗಳ ನಾಯಕರು ಪ್ರಚಾರದ ನೋಟೀಸನ್ನು ಹಂಚಿದರು.

– ಮೇಲೆ ಕೊಟ್ಟಿರುವ ವಾಕ್ಯಗಳಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಗುರುತಿಸಿ ಬರೆಯಿರಿ.

12. (ಅ) ಮದುವೆಯ ಮಂಟಪವನ್ನು ಸಿಂಗರಿಸಲು ಮಾಲೆಗಾರನು ಆಗಮಿಸಿದನು.

(ಆ) ಕ್ರಿಕೆಟ್ ಪಂದ್ಯದಲ್ಲಿ ಗೆದ್ದ ಬಳಿಕ ರಾಮು ಮತ್ತು ಶ್ಯಾಮುವಿನ ನಡುವಿನ ಗೆಳೆತನ ಇನ್ನೂ ಗಟ್ಟಿಯಾಯಿತು.

– ಮೇಲೆ ಕೊಟ್ಟಿರುವ ವಾಕ್ಯಗಳಲ್ಲಿ ಬಂದಿರುವ ತದ್ಧಿತ ಪ್ರತ್ಯಯ ಪದಗಳನ್ನು ಗುರುತಿಸಿರಿ.

13. ಭೀಮನ ಕಪಿಮುಷ್ಟಿಯಿಂದ ಹೇಗಾದರೂ ಪಾರಾಗಬಹುದೆಂಬ ವೈರಿಗಳ ಕನಸು ನನಸಾಗಲಿಲ್ಲ.

ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ತಯಾರಿಸಿರಿ.

14. ಯುದ್ಧ ಮುಕ್ತ ಸಮಾಜ ನಿರ್ಮಾಣದ ಸಂದೇಶವನ್ನು ಸಾರುವ ಎರಡು ಘೋಷಣಾ ವಾಕ್ಯಗಳನ್ನು ಸಿದ್ಧಪಡಿಸಿರಿ.

15. ಕೆಳಗೆ ನೀಡಲಾದ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

ಆ ರಾತ್ರಿಯ ಊಟವಾದ ಬಳಿಕ ಎಲ್ಲರೂ ನದೀ ದಂಡೆಯಲ್ಲಿ ವಿಶ್ರಾಂತಿಯನ್ನು ಪಡೆದರು.

16. ಕೆಳಗೆ ನೀಡಲಾದ ವಾಕ್ಯವನ್ನು ಶಿಷ್ಟರೂಪಕ್ಕೆ ಪರಿವರ್ತಿಸಿ ಬರೆಯಿರಿ.

ನಂಗೇನ್ ಗ್ರಾಚಾರನಾ ಬಕಾಸುರನ ಬಾಯ್ಗೆ ಓಗಾಕೆ. ನಾ ಬರಾಕಿಲ್ಲ. ಏನಾರ ಮಾಡ್ಕೊ ಓಗು !

17. ಕೆಳಗೆ ನೀಡಲಾದ ಹಳೆಗನ್ನಡ ಗದ್ಯಭಾಗವನ್ನು ಹೊಸಗನ್ನಡಕ್ಕೆ ರೂಪಾಂತರಿಸಿರಿ.

ಆದಿತ್ಯೋದಯಮಾಗಲೊಡಂ ಧರ್ಮಬುದ್ಧಿ ದೇವಗುರುದ್ವಿಜಪೂಜೆಗಳಂ ಮಾಡುತ್ತುಂ

18. 'ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು' ಈ ಮಾತಿನ ಆಶಯವನ್ನು ಬರೆಯಿರಿ.

**19 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.** **(4 × 4 = 16)**

19. ಸರಿ ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಭುವನೇಶ್ವರಿ ಹೆಗಡೆ | ಅಪ್ರತಿಮ ಪ್ರತಿನಾಯಕ ಶೇಣಿ |
| ಎಂ.ಎಸ್.ಕೆ. ಪ್ರಭು | ಒಸರು |
| ಫಕೀರ್ ಮುಹಮ್ಮದ್ ಕಟ್ಪಾಡಿ | ಬಕ |
| ಅಮೃತ ಸೋಮೇಶ್ವರ | ಮೂಢನಂಬಿಕೆಗಳ ಬೀಡಿನಲ್ಲಿ |

20. 'ನಮ್ಮ ಮನಸ್ಸಿನ ಕೋಪವು ನಮಗೇ ಹಾನಿಯನ್ನುಂಟು ಮಾಡುತ್ತದೆ' ಎಂಬುದನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ಹೇಗೆ ಸಮರ್ಥಿಸಿದ್ದಾರೆ ?

21. ಕೆಳಗೆ ನೀಡಲಾದ ಪದ್ಯಸಾಲುಗಳ ಆಸ್ವಾದನಾ ಟಿಪ್ಪಣಿಯನ್ನು ಬರೆಯಿರಿ.

ಗಿಡಗಂಟೇಯಾ ಕೊರಳೊಳಗಿಂದ

ಹಕ್ಕಿಗಳ ಹಾಡು

ಹೊರಟಿತು ಹಕ್ಕಿಗಳ ಹಾಡು

ಗಂಧರ್ವರಾ ಸೀಮೆಯಾಯಿತು

ಕಾಡಿನಾ ನಾಡು

ಕ್ಷಣದೊಳು ಕಾಡಿನಾ ನಾಡು

22. ಕೆಳಗೆ ಕೊಡಲಾದ ಜನಪದ ತ್ರಿಪದಿಯ ಆಶಯವನ್ನು ಬರೆಯಿರಿ.

ಹಣ್ಣು ಹಾಲಿಗಿಂತ ಬೆಣ್ಣೆ ತುಪ್ಪಕ್ಕಿಂತ

ಚೆನ್ನಾಗಿ ಕಳಿತ ರಸಬಾಳೆ – ಹಣ್ಗಿಂತ

ಚೆನ್ನ ಕಾಣೆ ತಾಯಿ ಎದೆಹಾಲು

23. ಉತ್ತರ ಕನ್ನಡ ಜಿಲ್ಲೆಯ ಕಾಡುಗಳಲ್ಲಿ ರಾತ್ರಿಕಾಲದಲ್ಲಿ ಕೇಳಿಬರುವ ಹಕ್ಕಿಯ ಕೂಗಿಗೆ ಸಂಬಂಧಿಸಿದಂತೆ ಅಲ್ಲಿಯ ಜನರಲ್ಲಿರುವ ನಂಬಿಕೆಯೇನು ? 'ಮೂಢನಂಬಿಕೆಗಳ ಬೀಡಿನಲ್ಲಿ' ಪಾಠಭಾಗದ ಆಧಾರದಲ್ಲಿ ನಿರೂಪಿಸಿರಿ.

24. ಕೆಳಗೆ ನೀಡಲಾದ ಇಂಗ್ಲಿಷ್ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ.

Once, a rich merchant was going on a tour to a city on business. Before starting the journey, he asked each of his three daughters what she would like to have as a present on his return.

Merchant – ವ್ಯಾಪಾರಿ, business – ವ್ಯಾಪಾರ, journey – ಯಾತ್ರೆ, daughters – ಹೆಣ್ಣುಮಕ್ಕಳು, present – ಬಹುಮಾನ.

25. ಕೆಳಗೆ ನೀಡಲಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜೀವನಚರಿತ್ರೆಯ ಭಾಗವನ್ನು ಆತ್ಮಕಥೆಯಾಗಿ ಪರಿವರ್ತಿಸಿ ಬರೆಯಿರಿ.

ಅಬ್ದುಲ್ ಕಲಾಂ ಅವರು ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ಪ್ರಕಟವಾದಾಗ ಚೆನ್ನೈನಲ್ಲಿದ್ದರು. ಅದಕ್ಕಿಂತ ಕೆಲವು ದಿನ ಮೊದಲು ಹೈದರಾಬಾದಿನ ಒಂದು ಆಸ್ಪತ್ರೆಗೆ ಭೇಟಿ ನೀಡಿ ಬುದ್ಧಿಮಾಂದ್ಯ ಮಕ್ಕಳ ಮಿದುಳಿನ 'ಚಿಪ್' ಅಳವಡಿಸುವ ತಂತ್ರಜ್ಞಾನದ ಕುರಿತು ಅಲ್ಲಿನ ಅಧಿಕಾರಿಗಳೊಂದಿಗೆ ಚರ್ಚಿಸಿದ್ದರು. ಅಧ್ಯಕ್ಷರಾದ ತರುವಾಯ ಲಕ್ಷಾಂತರ ಮಕ್ಕಳನ್ನು ಅಬ್ದುಲ್ ಕಲಾಂ ಭೇಟಿಯಾದರು. ಮಕ್ಕಳನ್ನು ಹತ್ತಿರ ಕೂರಿಸಿಕೊಂಡು ನೆನಪಿನ ಬುತ್ತಿ ಬಿಚ್ಚಿ ಮಾತನಾಡುತ್ತಿದ್ದರು.

**26 ರಿಂದ 32 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.** **(5 × 6 = 30)**

26. ನಿಮ್ಮ ಶಾಲೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರದರ್ಶನಗೊಳ್ಳಲಿರುವ 'ಬಕ' ನಾಟಕದ ಪ್ರಚಾರಕ್ಕಾಗಿ ಅಗತ್ಯವಾದ ಭಿತ್ತಿಪತ್ರವೊಂದನ್ನು ಸಿದ್ಧಪಡಿಸಿರಿ.

27. 'ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ' ಕಾವ್ಯಭಾಗದಲ್ಲಿ ಬಂದಿರುವ ಚಂಡಮಾರಿ ದೇವತೆಯ ಜಾತ್ರಾ ಮಹೋತ್ಸವದ ವಿಶೇಷತೆಯ ಕುರಿತು ಟಿಪ್ಪಣಿಯನ್ನು ಬರೆಯಿರಿ.

28. ಡಾ.ಎಚ್.ಎಲ್. ಪುಷ್ಪ ಅವರ 'ಸುನಾಮಿಯ ಹಾಡು' ಕವನದ ಸಾಲುಗಳನ್ನು ಕೆಳಗೆ ನೀಡಲಾಗಿದೆ. ಸಾಲುಗಳ ಆಧಾರದಲ್ಲಿ ಸುನಾಮಿಯ ತೀವ್ರತೆಯ ಪರಿಣಾಮವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ವಾಸ್ಕೋಡಗಾಮನ ನಾವೆ, ಟೈಟಾನಿಕ್‌ನ
ಅವಶೇಷಗಳು ಕಾಗದದ ದೋಣಿಗಳಾಗಿ ತೇಲುತ್ತಾ
ಮಂಗಳವೋ, ಶುಕ್ರವೋ ಯಾವುದಾದರೊಂದು
ಗ್ರಹ ಹುಡುಕಲೇ ಬೇಕು
ಉಳಲು, ಬಿತ್ತಲು, ಮನೆಯ ಕಟ್ಟಲು
ಮತ್ತೆ ತೊಟ್ಟಿಲು ತೂಗಲು
ಹೌದು ಇತಿಹಾಸದ ಚಕ್ರ ಸುತ್ತಲೇಬೇಕು
ಅಣುಯುಗದಿಂದ ಶಿಲಾಯುಗಕ್ಕೆ
ಶಿಲಾಯುಗದಿಂದ ಮತ್ತೊಂದು ಯುಗಕ್ಕೆ

29. ‘ಊರಿಗೆ ನೀರಿಲ್ಲದ ಸ್ಥಿತಿಯೆಂದರೆ ಖಾದ್ರಿಬ್ಯಾರಿಯ ತಾಕತ್ತಿಗೆ ಹಾಕಿದ ಸವಾಲಲ್ಲವೇ ?’ ಈ ಮಾತಿನ ಆಧಾರದಲ್ಲಿ ಸುರಂಗ ತೋಡುವುದರಲ್ಲಿ ನಿಪುಣನಾದ ಖಾದ್ರಿಕಾಕನ ಪಾತ್ರಚಿತ್ರಣವನ್ನು ಮಾಡಿರಿ.

30. ನೀವು ಇತ್ತೀಚೆಗೆ ಕೈಗೊಂಡ ಪ್ರವಾಸದ ಅನುಭವವನ್ನು ಹಂಚಿಕೊಂಡು ಪ್ರವಾಸ ಕಥನವೊಂದನ್ನು ಸಿದ್ಧಪಡಿಸಿರಿ.

31. ಕೆಳಗೆ ಕೊಟ್ಟಿರುವ ಪದ್ಯಸಾಲುಗಳಲ್ಲಿ ಅಡಕವಾಗಿರುವ ಜೀವನಮೌಲ್ಯವನ್ನು ಕುರಿತು ಲೇಖನವೊಂದನ್ನು ಬರೆಯಿರಿ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು

ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ

ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ

ಎಲ್ಲರೊಳಗೊಂದಾಗು ಮಂಕುತಿಮ್ಮ

32. ‘ವಿಶ್ವಾಸದ್ರೋಹದಿಂದ ವ್ಯಕ್ತಿ ತಾನು ಪತನಗೊಳ್ಳುವುದರೊಂದಿಗೆ ಇತರರ ನಾಶಕ್ಕೂ ಕಾರಣನಾಗುತ್ತಾನೆ’. ಈ ಮಾತು ದುಷ್ಟಬುದ್ಧಿಯ ಸ್ವಭಾವಕ್ಕೆ ಪೂರಕವಾಗಿದೆಯೇ ? ವಿವರಿಸಿರಿ.

**33 ರಿಂದ 35 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.** **(2 × 8 = 16)**

33. ಹಸಿವು, ಬಡತನ, ಶೋಷಣೆ ಮೊದಲಾದ ಜ್ವಲಂತ ಸಮಸ್ಯೆಗಳು ಕುಂ. ವೀರಭದ್ರಪ್ಪನವರ ‘ಹುಗ್ಗಿ’ ಕಥೆಯಲ್ಲಿ ಪ್ರತಿಫಲನಗೊಂಡ ಬಗೆ ಹೇಗೆ ? ವಿವರಿಸಿರಿ.

34. ರಾಕ್ಷಸ ಸಂವತ್ಸರದ ಆಷಾಢ ಅಮವಾಸ್ಯೆಯಂದು ರಾಜ ಮತ್ತು ಬಕರೊಳಗೆ ನಡೆದ ಒಪ್ಪಂದವೇನಾಗಿತ್ತು ? ಅದು ಏಕಚಕ್ರನಗರದ ಜನರ ಜೀವನೋತ್ಸಾಹವನ್ನು ಕದಡಿದ ಬಗೆ ಹೇಗೆ ? ವಿವರಿಸಿರಿ.

35. 'ಲಲನೆ ಪಡೆದೀಯೈದು ಮಂತ್ರಂಗಳಲಿ ಮೊದಲಿಗ ನೀನು .. ..' ಎಂಬ ಕೃಷ್ಣನ ಮಾತಿನಿಂದ ತನ್ನ ಜನ್ಮವೃತ್ತಾಂತವನ್ನು ಕರ್ಣನು ತಿಳಿಯುತ್ತಾನೆ. ಈ ಸಂದರ್ಭದಲ್ಲಿ ಕರ್ಣನಲ್ಲಿ ಉಂಟಾದ ಮಾನಸಿಕ ಸಂಘರ್ಷ ಮತ್ತು ಆತನಲ್ಲಿ ದುರ್ಯೋಧನನ ಕುರಿತಾದ ಸ್ವಾಮಿನಿಷ್ಠೆ ವ್ಯಕ್ತವಾದ ಬಗೆಯನ್ನು ಕುರಿತು ಪ್ರಬಂಧವನ್ನು ಬರೆಯಿರಿ.